'ಅನಿಕೇತನ' ಕವಿ. ಅವರು ನಿರ್ದಿಷ್ಟ ಸಂಸ್ಕೃತಿ, ಚರಿತ್ರೆ, ಪುರಾಣಗಳ ಗಡಿಗೆರೆಗಳನ್ನು ದಾಟಿ, 'ಮನುಷ್ಯನ' ಬಗ್ಗೆ ಬರೆದವರು. ಆದರೆ, ಪ್ರಾದೇಶಿಕ/ಕೌಟುಂಬಿಕ ಹಿನ್ನೆಲೆಗಳನ್ನು ಗರಿಮುದುರದಂತೆ ಉಳಿಸಿಕೊಂಡು, ಅಂಥ ಅನುಭವಗಳನ್ನು ಎಲ್ಲರ ಹಾಡು-ಪಾಡುಗಳ ಕಥನವಾಗಿಸಿದವರು. ಅವರು ಮನುಷ್ಯನ ಭಯ-ಸಂಭ್ರಮ-ತವಕ-ತಲ್ಲಣಗಳನ್ನು- ಆದಿಮ ಅನುಭವಗಳ ನೆಲೆಯಿಂದ ಆಧುನಿಕ ನಾಗರಿಕತೆಯ ಆಯಾಮಗಳವರೆಗೆ- ತಮ್ಮ ಸ್ವಂತ ಅನುಭವಗಳ ಚೌಕಟ್ಟಿನಲ್ಲಿಯೇ ಒಳಗೆ ತೆಗೆದುಕೊಂಡವರು; ಆ ತಿಳಿವನ್ನು ಕನ್ನಡದ ಸಂದರ್ಭದಲ್ಲಿ ಅನನ್ಯವಾದ ನುಡಿಗಟ್ಟಿನಲ್ಲಿ ಕಟ್ಟಿಕೊಟ್ಟವರು. ಅವರ ಇಂದ್ರಿಯಾನುಭವ, ಭಾವಾನುಭವ ಮತ್ತು ವೈಚಾರಿಕ ಅನುಭವಗಳ ಬೆಳವಣಿಗೆಗಳು ಭಾಷೆಯಲ್ಲಿ ಹೆಣೆದುಕೊಂಡು ಕವಿತೆಯಾಗಿವೆ. ಅರವತ್ತೂರು ವರ್ಷಗಳ ಜೀವನದಲ್ಲಿ ಅವರು ಬರೆದ ಕೇವಲ ಎಪ್ಪತ್ತೆರಡು ಕವಿತೆಗಳು, ಮನುಷ್ಯ ಜೀವನದ ನೆಲೆ-ಬೆಲೆಗಳನ್ನು ಸಾಧ್ಯತೆ-ಮಿತಿಗಳನ್ನು ಶೋಧಿಸುತ್ತವೆ. ಎಂತಹ ನೋವಿನಲ್ಲಿಯೂ ದುರಂತದಲ್ಲಿಯೂ ಜೀವನಪ್ರೀತಿಯನ್ನು ಕಳೆದುಕೊಳ್ಳದೆ ಬರೆಯಲು ಅವರಿಗೆ ಸಾಧ್ಯವಾಯಿತು. ಆದ್ದರಿಂದಲೇ ಅವರದು 'ಬಾಳಿನಾಸೆಗೆ ಹಾಲನೆರೆಯುವ ಭಾವಗೀತೆ.' ಅದು ಜೀವನದ ದರ್ಶನವೂ ಹೌದು, ವ್ಯಾಖ್ಯಾನವೂ ಹೌದು. ಸ್ವಾನುಭವದ ಗಟ್ಟಿಮುಟ್ಟಾದ ಹಂದರ ಇರುವುದರಿಂದ ಅದೂ ಕಥೆಯೂ ಆಗಿದೆ, ಕಥನವೂ ಆಗಿದೆ. 'ಅನ್ಯಕಥೆ'ಯನ್ನೂ 'ಆತ್ಮಕಥೆ'ಯಾಗಿ ನೋಡಬಲ್ಲ ಸಂವೇದನಾಶೀಲತೆ ಅವರ ಕವಿವ್ಯಕ್ತಿತ್ವವನ್ನು ರೂಪಿಸಿದೆ.

ಇಂಥ ಹಾಡನ್ನು ಹಾಡಬೇಕಲ್ಲ, ಅದ ಕೇಳಿ
ದಂಥ ಜಗ ತಿವಿದಂತೆ ಎದ್ದು ಕುಳ್ಳಿರಬೇಕು
ಮತ್ತೆ ಕೇಳಿರಬೇಕು.
ಇದು ಎಂಥ ಹಾಡು
ಮನುವಂಶ ಪಟ್ಟಿಹ ಪಾಡನೆಲ್ಲ ಹೊತ್ತಿಸಿ ನಮ್ಮ
ಮರವಟ್ಟ ಮನಗಳಲಿ ಉರಿಯಂತೆ ಕಾಡುವದು

'ಗುರಿಯಿಲ್ಲದಲೆ ಮರೆವಿನಲ್ಲಿ ಬದುಕಿಹಿರಿ
ಮತಿಮೂಢರಿರ!
ನಿಮ್ಮ ಪ್ರವಾಹಪತನದ ಗತಿಯು ಹರಿದಿದೆ
ಪ್ರಪಾತದೆಡೆ
ತಡೆಯಿರೋ'

ಎಂದು ಎದೆಯೊಡೆದು ಚೀರಾಡುವುದು.

'ನೀವು ಮಾರಣಮರಣಕಾಗಿ ಬಂದವರಲ್ಲ
ಜೀವ ವಿಭವವ ಕಟ್ಟಲೆಂದು ಐತಂದವರು
ಬರಲಾರಿರಾ ಬೆರೆಯಲಾರಿರಾ ಮನವಂದು?'
ಎಂದಂಗಲಾಚಿ ಎಚ್ಚರಿಸಿ ಗೋಗರೆಯುವುದು.'
ಇಂಥ ಹಾಡನು ಹಾಡಬೇಕಲ್ಲ!

**(ಎಪ್ಪತ್ತೆರಡು ಕವಿತೆಗಳು, ಪುಟ 149)**

ಹೀಗೆ ಓದುಗನೊಂದಿಗೆ ನೇರವಾದ ಸಂವಾದದಲ್ಲಿ ತೊಡಗಿಕೊಂಡು ಅವನಿಗೆ ತಲುಪುವಂತೆ ಬರೆಯುವುದು ಚಿತ್ತಾಲರ ಹಾದಿ. ಅವರು ನಮ್ಮನ್ನು ಕೀಳುಗಳೆಯದೆ ನಮ್ಮನ್ನು ತನ್ನ ಸಹಪಯಣಿಗರಾಗಿ ಮಾಡಿಕೊಳ್ಳುತ್ತಾರೆ. ಪ್ರತೀಕ, ಸಂಕೇತಗಳಿಂದ ನಿಬಿಡವಾದ, ಪದಗಳೊಂದಿಗೆ 'ಗುದಮುರಿಗೆ' ಆಡಿ ಅರ್ಥವನ್ನು ಹುಟ್ಟಿಸಿಕೊಳ್ಳಬೇಕಾದ 'ಒಗಟು ಕವಿತೆ' ಬರೆಯುವುದರಲ್ಲಿ ಇವರಿಗೆ ನಂಬಿಕೆಯಿಲ್ಲ. ಭಾಷೆಯ ಮೂಲಕವೇ ಅನುಭವ-ಭಾವನೆಗಳನ್ನು 'ಉತ್ಕಟ'ವಾಗಿಸಿ ನಮ್ಮನ್ನು ಅಲ್ಲಾಡಿಸುವುದು, ತನ್ನದೇ ತಲ್ಲಣಗಳನ್ನು ಸಾಮಾನ್ಯೀಕರಿಸಿ ನಮಗೆ ದಾಟಿಸುವುದು ಇವರ ದಾರಿ. ಕೆ.ಎಸ್. ನರಸಿಂಹಸ್ವಾಮಿಯವರ 'ತೆರೆದ ಬಾಗಿಲು' ನಂತರದ ಕವಿತೆಗಳೂ ಇದೇ ಬಗೆಯವು. (ಪ್ರತಿಮೆ, ಪ್ರತೀಕ, ಸಂಕೇತಗಳನ್ನು ಬಳಸಿಕೊಳ್ಳುವ ಮಾರ್ಗವು ತಪ್ಪೆಂದು ನಾನು ಹೇಳುತ್ತಿಲ್ಲ. ಅದು ಕವಿತೆಯ ಇನ್ನೊಂದು ಬಗೆ.)

## 2

ಉತ್ತರ ಕನ್ನಡ ಜಿಲ್ಲೆಯ, ಗೋಕರ್ಣ ತಾಲ್ಲೂಕಿನ ಹನೇಹಳ್ಳಿಯಲ್ಲಿ ಹುಟ್ಟಿದ ಗಂಗಾಧರ ಚಿತ್ತಾಲರು ಕನ್ನಡದ ಇನ್ನೊಂದು ನಿಧಿಯಾದ ಯಶವಂತ ಚಿತ್ತಾಲರ 'ಗಂಗಣ್ಣ'. ಬಹಳ ಪ್ರತಿಭಾವಂತ ವಿದ್ಯಾರ್ಥಿಯಾಗಿ, ಮೆಟ್ರಿಕ್ ಪರೀಕ್ಷೆಯಲ್ಲಿ ಇಡೀ